# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 02.01.2020**

## ಪೂಜ್ಯ ಮಹಾಪೌರರು ರವರ ಅಧ್ಯಕ್ಷತೆಯಲ್ಲಿ ವ್ಯಾಪಾರದಲ್ಲಿ ಸರಳತೆ(Ease of Doing Businees) ಕುರಿತು ಸಭೆ:



ವ್ಯಾಪಾರದಲ್ಲಿ ಸರಳತೆ(Ease of Doing Businees) ಅಡಿ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸರಳೀಕರಣಗೊಳಿಸುವ ಸಂಬಂಧ ಪೂಜ್ಯ ಮಹಾಪೌರರು ರವರ ಅಧ್ಯಕ್ಷತೆಯಲ್ಲಿ ಇಂದು ಪಾಲಿಕೆ ಕೇಂದ್ರ ಕಛೇರಿ ಸಭಾಂಗಣ-1ರಲ್ಲಿ ಸಭೆ ನಡೆಯಿತು. ಈ ವೇಳೆ ಆಡಳಿತ ಪಕ್ಷದ ನಾಯಕರು ಶ್ರೀ ಮುನೀಂದ್ರ ಕುಮಾರ್, ವಿರೋಧ ಪಕ್ಷದ ನಾಯಕರು ಶ್ರೀ ಅಬ್ದುಲ್ ವಾಜೀದ್, ನಗರ ಯೋಜನೆ ಅಪರ ನಿರ್ದೇಶಕರು ಶ್ರೀ ಪ್ರಸಾದ್, ನಗರ ಯೋಜನೆ ಜಂಟಿ ನಿರ್ದೇಶಕರಾದ ಶ್ರೀ ಮಂಜೇಶ್, ಶ್ರೀ ರಾಘವೇಂದ್ರ ಪ್ರಸಾದ್ ಹಾಗೂ ಇತರೆ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ರವರು ಅಮೃತ್(Atal Mission for Rejuvenation and Urban Transformation-AMRUT) ಯೋಜನೆ ಜಾರಿತಂದಿದೆ. ಅದರಡಿ ವ್ಯಾಪಾರದಲ್ಲಿ ಸರಳತೆ(Ease of Doing Businees) ಯೋಜನೆಯಡಿ ಕಟ್ಟಡ ನಕ್ಷೆ ಮಂಜೂರಾತಿ ಪದ್ಧತಿಯನ್ನು ಸರಳೀಕರಣಗೊಳಿಸಲು ಕ್ರಮವಹಿಸಲಾಗುತ್ತಿದ್ದು, ಅದನ್ನು ಶೀಘ್ರ ಜಾರಿತರಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮಹಾಪೌರರು ತಿಳಿಸಿದರು.

ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಹಾಪೌರರು, ದೇಶದ ವ್ಯಾಪಾರದಲ್ಲಿ ಸರಳತೆ ತರಲು ವಿಶ್ವಬ್ಯಾಂಕ್ Ease of Doing Businees ಯೋಜನೆ ಅಡಿ ಶ್ರೇಯಾಂಕ ನೀಡುತ್ತದೆ. ಇದರಲ್ಲಿ 191 ದೇಶಗಳು ಭಾಗವಹಿಸುತ್ತಿವೆ. ಈ ಯೋಜನೆಯಲ್ಲಿ ಉತ್ತಮ ಅಂಕ ಪಡೆದರೆ ಬೆಂಗಳೂರಿಗೆ ಸಾಲ-ಸೌಲಭ್ಯಗಳು ಸಿಗಲಿವೆ ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ನಗರ ಯೋಜನೆ ಪದ್ದತಿ ಸರಳೀಕರಣಗೊಳಿಸಲು ಹಾಗೂ ಕಾಗದ ರಹಿತವಾಗಿ ಕಟ್ಟಡ ನಕ್ಷೆ ಮಂಜೂರಾತಿ, ಕಟ್ಟಡ ಯೋಜನೆ ಜಾರಿಗೊಳಿಸುವ, ಕಟ್ಟಡ ನಕ್ಷೆ ಮಂಜೂರಾತಿಗೆ ತಗಲುವ ವೆಚ್ಚ ಪಾವತಿಸುವುದು ಸೇರಿದಂತೆ ಎಲ್ಲವನ್ನು ಆನ್‌ಲೈನ್ ಪದ್ದತಿ ಜಾರಿಗೊಳಿಸಲು ಸಾಫ್ಟ್‌ವೇರ್ ಸಿದ್ದಪಡಿಸಲಾಗುವುದು. ಆ ಬಳಿಕ ನಕ್ಷೆ ಮಂಜೂರಾತಿಯ ಕಡತ ಯಾರ ಬಳಿ ಇದೆ ಎಂಬ ಮಾಹಿತಿ ಕೂಡಾ ಲಭ್ಯವಾಗಲಿದೆ. ಕಡತವು ಒಬ್ಬ ಅಧಿಕಾರಿ ಬಳಿ 7 ದಿನಗಳಿಗೂ ಹೆಚ್ಚು ಸಮಯವಿದ್ದಲ್ಲಿ ಸ್ವಯಂ ಅನೋಮೋದನೆ(ಡೀಮ್ಡ್ ಅಪ್ರೂವ್ಡ್) ಸಿಗಲಿದೆ. ಇದರಿಂದ ನಗರದಲ್ಲಿ ಮನೆ/ಕಟ್ಟಡ ನಿರ್ಮಾಣ ಮಾಡುವವರಿಗೆ ಯಾವುದೇ ತೊಂದರೆ ಆಗದೆ ತ್ವರಿತವಾಗಿ ನಕ್ಷೆ ಮಂಜೂರಾತಿ ಸಿಗಲಿದೆ ಎಂದರು.

ನುರಿತ ಸಾಫ್ಟ್‌ವೇರ್ ಸಂಸ್ಥೆಯನ್ನು ಕರೆಸಿ ಆದಷ್ಟು ಬೇಗ ಆನ್‌ಲೈನ್ ಪದ್ದತಿ ಅನುಷ್ಠಾನಗೊಳಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಟ್ಟಡ ನಕ್ಷೆ ಮಂಜೂರಾತಿಯನ್ನು ಮೂರು ವಿಭಾಗದಲ್ಲಿ ಅನುಮತಿ ನೀಡಲು ಕ್ರಮವಹಿಸಲಾಗುತ್ತಿದ್ದು, 600 ಚದರಡಿ ಜಾಗದೊಳಗಿನ ಅಳತೆಯಲ್ಲಿ ನಿರ್ಮಾಣ ಮಾಡುವ ಮನೆಗೆ ಆಯಾ ವಾರ್ಡ್ ಸಹಾಯಕ ಇಂಜಿನಿಯರ್, 11 ರಿಂದ 15 ಮೀಟರ್ ಕಟ್ಟಡಗಳಿಗೆ ವಲಯಮಟ್ಟದಲ್ಲಿ ಹಾಗೂ ಬೃಹತ್ ಕಟ್ಟಡಗಳ ನಿರ್ಮಾಣದ ಅನುಮತಿ ಕೇಂದ್ರ ಕಛೇರಿಯಲ್ಲಿ ಅನುಮತಿ ಪಡೆಯುವ ಪದ್ಧತಿ ಜಾರಿಗೊಳಿಸುವ ಬಗ್ಗೆ ಚರ್ಚಿಸಲಾಗಿದೆ ಎಂದರು.

**ನಗರ ಯೋಜನೆ ಅಪರ ನಿರ್ದೇಶಕರು ಪ್ರಸಾದ್ ಮಾತನಾಡಿ,** ದೇಶದ ವ್ಯಾಪಾರ ವಾತಾವರಣದ ಸಮಗ್ರ ವರದಿಯ ಆಧಾರದ ಮೇಲೆ ವಿಶ್ವ ಬ್ಯಾಂಕ್ ದೇಶದ ವ್ಯಾಪಾರದಲ್ಲಿ ಸರಳತೆ(Ease of Doing Businees)ಯ ಶ್ರೇಯಾಂಕ ನಿರ್ಧರಿಸಿ ಪ್ರಕಟಿಸುತ್ತಿರುತ್ತದೆ. ಪ್ರಸ್ತುತ ಭಾರತವು ಶ್ರೇಯಾಂಕದಲ್ಲಿ 63ನೇ ಸ್ಥಾನದಲ್ಲಿದ್ದು, ಕಟ್ಟಡ ನಿರ್ಮಾಣ ಮಂಜೂರಾತಿಯ ಅಂಶದಲ್ಲಿ ಭಾರತವು 27ನೇ ಸ್ಥಾನದಲ್ಲಿದೆ ಎಂದರು.

ವಿಶ್ವ ಬ್ಯಾಂಕ್ ದೆಹಲಿ ಮತ್ತು ಮುಂಬೈ ನಗರಗಳ ಜೊತೆಗೆ ಪ್ರಸಕ್ತ ಸಾಲಿನಿಂದ ಕೋಲ್ಕತಾ ಮತ್ತು ಬೆಂಗಳೂರನ್ನು ನಗರಗಳನ್ನು Ease of Doing Businees ನಡಿ ಆಯ್ಕೆ ಮಾಡಿದ್ದು, ಕಟ್ಟಡ ನಿರ್ಮಾಣ ಮಂಜೂರಾತಿ ಸರಳೀಕರಣಗೊಳಿಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**